2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 35/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಚೆನ್ನಮ್ಮ | ಪಿಡಬ್ಲೂ-9 |
| ಗಂಡನ ಹೆಸರು | - | ಬೂದಯ್ಯ | ಸಿಡಬ್ಲೂ -9 |
| ವಯಸ್ಸು | - | 59 ವರ್ಷ | |
| ಉದ್ಯೋಗ | - | ಅಂಗನವಾಡಿ ಕಾರ್ಯಕರ್ತೆ | |
| ವಾಸ ಸ್ಥಳ | - | ಕೆಂಗಟ್ಟೆ | |

ದಿನಾಂಕಃ 11.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಿಲ್ಲ. ಮೃತ ರುದ್ರಸ್ವಾಮಿ ನನ್ನ ತಮ್ಮನ ಮಗ. ಚಾಸಾ.1 ಗೊತ್ತಿಲ್ಲ. ಫ್ರಾಸಾ.7 ನನ್ನ ತಮ್ಮನ ಹೆಂಡತಿ ಅಂದರೆ ಮೃತನ ತಾಯಿ. ಫ್ರಾಸಾ.8 ಮೃತನಿಗೆ ಮಾವನಾಗಬೇಕು. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ಈಗ್ಗೆ 20 ವರ್ಷಗಳ ಹಿಂದೆ ರುದ್ರಸ್ವಾಮಿ ಕೆಂಗಟ್ಟೆ ಗ್ರಾಮದಿಂದ ಬೆಂಗಳೂರಿನ ಕೆಲಸಕ್ಕೆಂದು ಹೋಗಿದ್ದೆನು. ಈಗ್ಗೆ ಸುಮಾರು 15 ವರ್ಷಗಳಿಂದ ನಾನು ಸದರಿ ರುದ್ರಸ್ವಾಮಿಯ ಸಂಪರ್ಕದಲ್ಲಿ ಇಲ್ಲ. ನಾವು ಇಲ್ಲಿಯವರೆಗೂ ರುದ್ರಸ್ವಾಮಿ ಬದುಕಿದ್ದಾನೆ ಎಂದೇ ಭಾವಿಸಿದ್ದೇವೆ. ಆತ ಮೃತಪಟ್ಟಿರುವ ಬಗ್ಗೆ ನಮಗೆ ಯಾವುದೇ ಮಾಹಿತಿ ಬಂದಿಲ್ಲ. ಈಗ್ಗೆ 4 ವರ್ಷಗಳ ಹಿಂದೆ ದೀಪಾವಳಿ ಹಬ್ಬ ಕಳೆದ 7-8 ದಿನಗಳ ಬಳಿಕ ಬೆಂಕಿಕೆರೆಯ ಬಳಿ

ಯಾರೋ ಪೊಲೀಸರು ಯಾವುದೋ ಗಂಡಸಿನ ಶವ ಸಿಕ್ಕಿದೆ ಅದು ನಿಮಗೆ ಸಂಬಂಧಿಸಿದವರ ಶವವೇ ಎಂದು ಗುರುತಿಸಲು ನನ್ನನ್ನು ಕರೆಸಿದ್ದರು. ಆಗ ನಾನು ಬೆಂಕಿಕೆರೆಯ ಬಳಿ ಇರುವ ಒಂದು ಅರಣ್ಯದಂತಹ ಪ್ರದೇಶಕ್ಕೆ ಹೋಗಿದ್ದೆನು. ಆಗ ನನ್ನೊಂದಿಗೆ ಫ್ರಾಸಾ.7 ರವರು ಸಹ ಬಂದಿದ್ದರು. ಆದರೆ ಪೊಲೀಸರು ಅಲ್ಲಿ ನಮಗೆ ಯಾವುದೇ ಶವವನ್ನು ತೋರಿಸಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ.

3. ಸಾಕ್ಷಿಗೆ ಈಗಾಗಲೇ ನಿಪಿ.3 ಮತ್ತು 5 ಎಂದು ಗುರುತಿಸಲಾಗಿರುವ ಫೋಟೋಗಳನ್ನು ಮತ್ತು ಮತ್ತೊಂದು ಫೋಟೋವನ್ನು ತೋರಿಸಲಾಗಿ ಅವುಗಳಲ್ಲಿ ಕಂಡು ಬರುವ ರುಂಡ ಮತ್ತು ಮುಂಡ ಯಾರದ್ದು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

4. ನನ್ನ ತಮ್ಮನಿಗೆ ರುದ್ರಸ್ವಾಮಿ ಮತ್ತು ಲತಾ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ನನ್ನ ತಮ್ಮನ ಮಗನಾದ ರುದ್ರಸ್ವಾಮಿ ಘಟನೆಯ ಪೂರ್ವದಲ್ಲಿ ಸುಮಾರು 12 ವರ್ಷಗಳ ಹಿಂದೆ ಮನೆಯನ್ನು ಬಿಟ್ಟು ಹೋಗಿ ಬೆಂಗಳೂರಿನಲ್ಲಿ ನೆಲೆಸಿದ್ದನು ಎಂದರೆ ಸರಿಯಲ್ಲ. ಆಗ್ಗೆ ಸುಮಾರು 10 ವರ್ಷಗಳ ಹಿಂದೆ

ರುದ್ರಸ್ವಾಮಿ ಚಾಸಾ.14 ವಾಣಿ ರವರನ್ನು ಪ್ರೀತಿಸಿ ಮದುವೆಯಾಗಿದ್ದನು ಎಂದರೆ ಸರಿಯಲ್ಲ. ಚಾಸಾ.14 ರವರಿಗೆ ಆಗಾಗಲೇ ಮದುವೆಯಾಗಿ ಆಕೆಗೆ ಐಶ್ವರ್ಯ ಎಂಬ ಮಗಳು ಇದ್ದಳು ಎಂದರೆ ಸರಿಯಲ್ಲ. ನಂತರ ರುದ್ರಸ್ವಾಮಿ ಮತ್ತು ಚಾಸಾ.14 ರವರಿಗೆ ಅರ್ಜುನ ಎಂಬ ಮಗ ಜನಿಸಿದನು ಎಂದರೆ ಸರಿಯಲ್ಲ. ಮದುವೆಯಾದ ಬಳಿಕ ರುದ್ರಸ್ವಾಮಿಗೆ ಆತನ ಹೆಂಡತಿ ವಾಣಿಯೊಂದಿಗೆ ಸಂಸಾರದಲ್ಲಿ ಮನಸ್ತಾಪ ಬಂದು ಘಟನೆಯ ಪೂರ್ವದಲ್ಲಿ 5-6 ವರ್ಷಗಳ ಹಿಂದಿನಿಂದ ಅವರಿಬ್ಬರು ಬೇರೆಯಾಗಿದ್ದರು ಎಂದರೆ ಸರಿಯಲ್ಲ. ಅವರ ಮಗ ಅರ್ಜುನ್ ಸಹ ಚಾಸಾ.14 ರವರೊಂದಿಗೆ ವಾಸಿಸುತ್ತಿದ್ದನು ಎಂದರೆ ಸರಿಯಲ್ಲ. ಘಟನೆಯ ಪೂರ್ವದಲ್ಲಿ 5-6 ವರ್ಷಗಳ ಹಿಂದಿನಿಂದ ರುದ್ರಸ್ವಾಮಿ ಅವರ ಮನೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

5. ಘಟನೆಯ 15 ದಿನಗಳ ಹಿಂದೆ ರುದ್ರಸ್ವಾಮಿ ಚೆನ್ನಗಿರಿ ತಾಲ್ಲೂಕು ಮರಬನಹಳ್ಳಿಯಲ್ಲಿರುವ ಫ್ರಾಸಾ.7 ರವರ ತಾಯಿ ಮಹದೇವಮ್ಮಳ ಮನೆಗೆ ಹೋಗಿದ್ದನು ಎಂದರೆ ಸರಿಯಲ್ಲ. ಆಗ ನಾನು ಮತ್ತು ಫ್ರಾಸಾ.7 ರವರು ಸಹ ಮರಬನಹಳ್ಳಿಯಲ್ಲಿರುವ ಫ್ರಾಸಾ.7 ರವರ ತಾಯಿಯ ಮನೆಗೆ ಹೋಗಿದ್ದೆನವು ಎಂದರೆ ಸರಿಯಲ್ಲ.

6. ಆಗ ರುದ್ರಸ್ವಾಮಿ ನನ್ನನ್ನು ಫ್ರಾಸಾ.7 ರವರನ್ನು ಮತ್ತು ಮಹದೇವಮ್ಮನನ್ನು ರವರನ್ನು ಆತನ ಕಾರಿನಲ್ಲಿ ಬೆಂಗಳೂರಿನ

ವಿದ್ಯಾರಣ್ಯಪುರಂನಲ್ಲಿರುವ ಆತನ ಮನೆಗೆ ಕರೆದುಕೊಂಡು ಹೋಗಿದ್ದನು ಎಂದರೆ ಸರಿಯಲ್ಲ. ಆ ರೀತಿ ನಾವು ರುದ್ರಸ್ವಾಮಿಯ ಮನೆಗೆ ಹೋದ 2 ದಿನಗಳ ಬಳಿಕ 1 ನೇ ಆರೋಪಿ ಆಶಾ ರುದ್ರಸ್ವಾಮಿಯ ಮನೆಗೆ ಬಂದಿದ್ದಳು ಎಂದರೆ ಸರಿಯಲ್ಲ. ಆಗ ರುದ್ರಸ್ವಾಮಿ ಆಕೆಯನ್ನು ನಮಗೆ ಪರಿಚಯಿಸಿ ಆಕೆ ಚೆನ್ನಗಿರಿಯ ಹತ್ತಿರವಿರುವ ಬೆಂಕಿಕೆರೆ ಗ್ರಾಮದವಳು ಮತ್ತು ಆಕೆಯ ಗಂಡ ಇಂಜಿನಿಯರ್ ಕೆಲಸ ಮಾಡುತ್ತಿದ್ದಾನೆಂದು ತಿಳಿಸಿದಳು ಎಂದರೆ ಸರಿಯಲ್ಲ. ನಂತರ ರುದ್ರಸ್ವಾಮಿ ನಮ್ಮನ್ನು ವಿದ್ಯಾರಣ್ಯಪುರಂನಲ್ಲಿರುವ 1 ನೇ ಆರೋಪಿಯ ಮನೆಗೂ ಕರೆದುಕೊಂಡು ಹೋಗಿದ್ದನು ಎಂದರೆ ಸರಿಯಲ್ಲ. 3-4 ದಿನಗಳ ನಂತರ ನಾವು ವಾಪಾಸ್ಸು ಊರಿಗೆ ಬಂದೆವು ಎಂದರೆ ಸರಿಯಲ್ಲ.

7. ದಿನಾಂಕ 10.11.2018 ರಂದು ಮಧ್ಯಾಹ್ನ 2.00 ಗಂಟೆಗೆ ಫ್ರಾಸಾ.8 ರವರು ನನಗೆ ಕರೆ ಮಾಡಿ ಬುಕ್ಕಾಂಬೂದಿ ಕೆರೆಯಲ್ಲಿ ಸುಮಾರು 30-35 ವರ್ಷದ ರುಂಡವಿಲ್ಲದ ಗಂಡಸಿನ ದೇಹ ಸಿಕ್ಕಿರುವುದಾಗಿ ಮತ್ತು ಮೃತದೇಹದ ಮೇಲೆ ವಾಣಿ ಮತ್ತು ಐಶ್ವರ್ಯ ಎಂಬ ಹಚ್ಚೆ ಗುರುತು ಇರುತ್ತದೆ ಎಂದು ವಿಜಯ ಕರ್ನಾಟಕ ಪೇಪರ್ ನಲ್ಲಿ ಬಂದಿದೆ, ಅದು ರುದ್ರಸ್ವಾಮಿಯದೇ ಇರಬಹುದು ಎಂದು ತಿಳಿಸಿ ನನಗೆ ಊರಿಗೆ ಬರುವಂತೆ ಹೇಳಿದರು ಎಂದರೆ ಸರಿಯಲ್ಲ.

8. ನಂತರ ನಾನು ಆ ವಿಚಾರವನ್ನು ಪ್ರಾಸಾ.7 ರವರಿಗೆ ಕರೆ ಮಾಡಿ ತಿಳಿಸಿ ಊರಿಗೆ ಬರುವಂತೆ ಹೇಳಿದೆನು ಎಂದರೆ ಸರಿಯಲ್ಲ. ನಂತರ ಪ್ರಾಸಾ.7 ರವರು ಬಂದ ಮೇಲೆ ನಾನು ಪ್ರಾಸಾ.7 ಮತ್ತು ಪ್ರಾಸಾ.8 ರವರು ಸೇರಿ ಮರಬನಹಳ್ಳಿಯ ರಾಜು ಎಂಬುವವರ ಕಾರಿನಲ್ಲಿ ರಾತ್ರಿ 9.00 ಗಂಟೆಗೆ ಅಜ್ಜಂಪುರ ಪೊಲೀಸ್ ಠಾಣೆಗೆ ಹೋದೆವು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ನಮಗೆ ಪ್ರಕರಣದ ವಿಚಾರವನ್ನು ತಿಳಿಸಿ ಅಮಾನತುಪಡಿಸಿಕೊಂಡಿದ್ದ ಒಂದು ಕಾಫಿ ಬಣ್ಣದ ಕಾರನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಕಾರು ರುದ್ರಸ್ವಾಮಿಯದ್ದಾಗಿತ್ತು ಎಂದರೆ ಸರಿಯಲ್ಲ. ನಂತರ ಪೊಲೀಸರು ರುದ್ರಸ್ವಾಮಿಯ ರುಂಡವಿಲ್ಲದ ಮೃತ ದೇಹದ ಫೋಟೋಗಳನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ನೋಡಲಾಗಿ ಅದು ರುದ್ರಸ್ವಾಮಿಯ ಮೃತದೇಹದ್ದಾಗಿರುತ್ತದೆ ಎಂದರೆ ಸರಿಯಲ್ಲ.

9. ನಂತರ ಪೊಲೀಸರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿರುವ ಸದರಿ ಮೃತ ದೇಹವನ್ನು ನೋಡಿಕೊಂಡು ಬರುವಂತೆ ನಮ್ಮನ್ನು ಪೊಲೀಸರೊಂದಿಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಮಧ್ಯ ರಾತ್ರಿ 12.00 ಗಂಟೆಯಾಗಿದ್ದರಿಂದ ಮಾರನೇ ದಿನ ಅಂದರೆ ದಿನಾಂಕ 11.11.2018 ರಂದು ಬೆಳಿಗ್ಗೆ ನಾವೆಲ್ಲರೂ ಸದರಿ ಶವಾಗಾರಕ್ಕೆ ಹೋಗಿ ನೋಡಿದಾಗ ಅಲ್ಲಿದ್ದ ಶವ ರುದ್ರಸ್ವಾಮಿಯ ರುಂಡವಿಲ್ಲದ ಮೃತ ದೇಹವಾಗಿರುತ್ತದೆ

ಎಂದರೆ ಸರಿಯಲ್ಲ.

10. ಸದರಿ ದೇಹವನ್ನು ನೋಡಲಾಗಿ ಕುತ್ತಿಗೆಯನ್ನು ಯಾವುದೋ ಬಲವಾದ ಆಯುಧದಿಂದ ಕಡಿದು ಕೊಲೆ ಮಾಡಿರುವುದಾಗಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ರುದ್ರಸ್ವಾಮಿಯ ಬಲ ಎದೆಯ ಮೇಲೆ ಐಶ್ವರ್ಯ ಎಂದು, ಎಡತೋಳಿನ ರಟ್ಟೆಯಲ್ಲಿ ವಾಣಿ ಮತ್ತು ಬೂದಿಸ್ವಾಮಿ ಎಂಬ ಹಚ್ಚೆಯ ಗುರುತುಗಳು ಇದ್ದವು ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಕಾರಣ ತಿಳಿಯಲಾಗಿ ಆಗ್ಗೆ 4-5 ದಿನಗಳ ಹಿಂದೆ ಯಾರೋ ದುರುದ್ದೇಶದಿಂದ ರುದ್ರಸ್ವಾಮಿಯ ಕುತ್ತಿಗೆ ಕಡಿದು ಕೊಲೆ ಮಾಡಿ ಗುರುತು ಸಿಗಬಾರದೆಂದು ರುಂಡು ಮತ್ತು ಮುಂಡವನ್ನು ಬೇರ್ಪಡಿಸಿ ಮುಂಡವನ್ನು ಬುಕ್ಕಾಂಬೂದಿ ಕೆರೆಗೆ ಚೀಲದಲ್ಲಿ ಕಟ್ಟಿ ಎಸೆದಿರುವುದಾಗಿ ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನು ತಿಳಿಸಿ ದಿನಾಂಕ 11.11.2018 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.19 ಎಂದು ಗುರುತಿಸಲಾಯಿತು.

11. ದಿನಾಂಕ 13.11.2018 ರಂದು ಪೊಲೀಸರು ನನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆ ದಿನ ಪೊಲೀಸರು ರುದ್ರಸ್ವಾಮಿಯನ್ನು ಕೊಲೆ ಮಾಡಿದ 1 ರಿಂದ 3 ಜನ ಆರೋಪಿತರನ್ನು ಬಂಧಿಸಿ ಸದರಿಯವರು ನನ್ನ ಮಗನ

ರುಂಡವನ್ನು ಬುಕ್ಕಾಂಬೂದಿ ಕೆರೆಯಲ್ಲಿ ಚೀಲದಲ್ಲಿ ಕಟ್ಟಿ ಎಸೆದಿರುವುದಾಗಿ ತಿಳಿಸಿದ ಮೇರೆಗೆ ದಿನಾಂಕ 12.11.2018 ರಂದು ರುದ್ರಸ್ವಾಮಿಯ ರುಂಡವನ್ನು ಪತ್ತೆ ಮಾಡಿ ಅದನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿರುವುದಾಗಿ ನಮಗೆ ತಿಳಿದುಬಂದ ಮೇರೆಗೆ ಆ ದಿನ ಅಂದರೆ ದಿನಾಂಕ 13.11.2018 ರಂದು ನಾನು ಪ್ರಾಸಾ.7 ಮತ್ತು ಪ್ರಾಸಾ.8 ರವರು ಶಿವಮೊಗ್ಗದ ಸದರಿ ಆಸ್ಪತ್ರೆಗೆ ಹೋಗಿದ್ದಾಗಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ರುಂಡವನ್ನು ನೋಡಲಾಗಿ ಅದು ರುದ್ರಸ್ವಾಮಿಯದ್ದಾಗಿರುತ್ತದೆ ಎಂದರೆ ಸರಿಯಲ್ಲ.

12. ರುದ್ರಸ್ವಾಮಿಯ ಸಾವಿಗೆ ಕಾರಣ ತಿಳಿಯಲಾಗಿ ರುದ್ರಸ್ವಾಮಿಯು ಬೆಂಗಳೂರಿನ ಚಾಮುಂಡೇಶ್ವರಿ ನಗರದಲ್ಲಿ ವಾಸವಿದ್ದ ಸಮಯದಲ್ಲಿ 1 ನೇ ಆರೋಪಿ ಮತ್ತು ಆಕೆಯ ಗಂಡ ಸ್ವಾಮಿಯನ್ನು ಪರಿಚಯ ಮಾಡಿಕೊಂಡು ಆತ 1 ನೇ ಆರೋಪಿಯೊಂದಿಗೆ ಅನೈತಿಕ ಸಂಬಂಧ ಬೆಳೆಸಿಕೊಂಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ನಂತರ ಆಕೆಯೊಂದಿಗೆ ಫೋಟೋ ತೆಗೆಸಿಕೊಂಡು ರುದ್ರಸ್ವಾಮಿ ಆಕೆಯ ಗಂಡನಿಗೆ ತೋರಿಸುವುದಾಗಿ ಮತ್ತು Face book ನಲ್ಲಿ ಬಿಡುವುದಾಗಿ ಬ್ಲಾಕ್ ಮೇಲ್ ಮಾಡಿ ಕಿರುಕುಳ ನೀಡುತ್ತಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ರುದ್ರಸ್ವಾಮಿಯ ಕಿರುಕುಳವನ್ನು ತಾಳಲಾರದೇ 1 ನೇ ಆರೋಪಿಯು ಆ ವಿಚಾರವನ್ನು ತನ್ನ ತಂದೆ ತಾಯಿಗೆ ತಿಳಿಸಿದ್ದಾಗಿ ನಂತರ ದಿನಾಂಕ 07.11.2018

ರಂದು ಆರೋಪಿತರು ರುದ್ರಸ್ವಾಮಿಯನ್ನು ಬೆಂಕಿಕೆರೆಗೆ ಕರೆಯಿಸಿಕೊಂಡು ಅವರ ತೋಟಕ್ಕೆ ಕರೆದುಕೊಂಡು ಹೋಗಿ ಅದೇ ದಿನ ಸಂಜೆ 5.00 ಗಂಟೆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಸೇರಿ ಮಚ್ಚು ಮತ್ತು ಕುಡುಗೋಲಿನಿಂದ ರುದ್ರಸ್ವಾಮಿಯ ಕುತ್ತಿಗೆಯನ್ನು ಕಡಿದು ರುಂಡ-ಮುಂಡವನ್ನು ಬೇರ್ಪಡಿಸಿ ಪ್ರತ್ಯೇಕ ಗೋಣಿ ಚೀಲಗಳಲ್ಲಿ ತುಂಬಿಕೊಂಡು ರುದ್ರಸ್ವಾಮಿಯ ಕಾರಿನಲ್ಲಿಯೇ ಬುಕ್ಕಾಂಬೂದಿ ಕೆರೆಗೆ ತಂದು ಎಸೆದು ಹೋಗಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ತಿಳಿದು ಬಂದ ಬಗ್ಗೆ ದಿನಾಂಕ 13.11.2018 ರಂದು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಮುಂದುವರೆದ ಹೇಳಿಕೆಯನ್ನು ನಿಪಿ.20 ಎಂದು ಗುರುತಿಸಲಾಯಿತು.

13. ಈ ಪ್ರಕರಣದಲ್ಲಿ ಪ್ರತ್ಯೇಕವಾಗಿ ದೊರೆತ ರುಂಡ ಮತ್ತು ಮುಂಡವನ್ನು ಗುರುತಿಸಿ ಅದು ರುದ್ರಸ್ವಾಮಿಯದ್ದು ಎಂದು ತಿಳಿಸಿ, ಆತ 1 ನೇ ಆರೋಪಿಯ ಮನೆಗೆ ಹೋದ ಬಳಿಕ ಕಾಣೆಯಾದ ಬಗ್ಗೆ ತಿಳಿಸಿ ಆತನ ಸಾವಿಗೆ ಆರೋಪಿತರು ಕಾರಣರೆಂದು ತಿಳಿದುಬಂದ ಬಗ್ಗೆ ಪೊಲೀಸರಿಗೆ ನಿಪಿ.19 ಮತ್ತು ನಿಪಿ.20 ರಂತೆ ಹೇಳಿಕೆಗಳನ್ನು ನೀಡಿದ್ದರೂ ಸಹ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.